5

# ಯೋಹಾನನ ಪುಸ್ತಕ

## ದೇವರ, ಕುಮಾರನಾದ ಕ್ರಿಸ್ತನು

ಇತರೆ ಸುವಾರ್ತೆಗಳ ಬರವಣಿಗೆಗಿಂತಲೂ, ಯೋಹಾನನ ಸುವಾರ್ತೆಯ ಬಹಳ ಸರಳವಾದ ಪುಸ್ತಕವಾಗಿದೆ. ಇದರ ಸರಳತೆಯ ಕಾರಣದಿಂದ, ಆರಂಭಿಕ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಇದರ ಹೊಸ ಒಡಂಬಡಿಕೆಯ ಗ್ರೀಕ್ ಪ್ರತಿಯನ್ನು ಬಳಸಲಾಗಿದೆ. ಇದರಲ್ಲಿರುವ ಪ್ರಸ್ತಾಪದ ವಿಚಾರವು ಇತರರಿಗಿಂತ ವಿಭಿನ್ನವಾಗಿದೆ.

ಯೋಹಾನನ ಶೈಲಿಯು ಪ್ರತ್ಯೇಕವಾಗಿದ್ದರೂ; ಈ ಹಿಂದಿನ ಸುವಾರ್ತೆಗಳಲ್ಲಿನ ಕೆಲವು ವಿಚಾರಗಳನ್ನು ಇದರಲ್ಲೂ ತಿಳಿಸಲಾಗಿದೆ. ವಿಶೇಷವಾದ ಪರಿಚಯವನ್ನು (1:1-18) ಮತ್ತು ಪ್ರತ್ಯೇಕ ಉದ್ದೇಶದ ಹೇಳಿಕೆಯನ್ನು ನೀಡಲಾಗಿದೆ (20:30, 31). ಹಿಂದಿನ ಮೂರು ಸುವಾರ್ತೆಗಳಿಗಿಂತಲೂ, ಯೋಹಾನನ ಸುವಾರ್ತೆ ವಿಶೇಷವಾಗಿದೆ, ಏಕೆಂದರೆ ಅದು ಬರೆಯಲ್ಪಟ್ಟ ಹಿನ್ನಲೆಯನ್ನು ಗಮನಿಸಬೇಕಾಗುತ್ತದೆ.

### ಯೋಹಾನನ ಪುಸ್ತಕದ ಪರಿಚಯ

**ಈ ಪುಸ್ತಕದ ಗ್ರಂಥಕತೃ**

ಈ ಪುಸ್ತಕದ ಬರಹಗಾರನು "... ಯೇಸುವಿನ ಪ್ರಿಯನಾದ ಶಿಷ್ಯನು" ಎಂದು ಈ ಪುಸ್ತಕದಲ್ಲಿ ತಿಳಿದು ಬರುತ್ತದೆ (21:20, 24).[1] ಈತನು ಅಪೋಸ್ತಲನಾದ ಯೋಹಾನನೆಂದು ಆದಿ ಸಭೆಯವರು ದೃಢಪಡಿಸಿದ್ದಾರೆ.[2] ಇರೇನಿಯಾಸನು, "ಹಿಂದಿನ ಮೂರು ಸುವಾರ್ತೆಗಳ ಕುರಿತು ತಿಳಿಸಿದ ನಂತರ ಕರ್ತನ ಎದೆಗೆ ಒರಗಿಕೊಂಡಿದ್ದ ಕರ್ತನ ಶಿಷ್ಯನಾದ ಯೋಹಾನನು, ಆಸ್ಯ ಸೀಮೆಯ ಎಫೆಸದಲ್ಲಿರುವಾಗ, ಸುವಾರ್ತಾ ಪ್ರಕಟನೆ ಮಾಡಿದನು."[3] ಎಂದು ತಿಳಿಸಿರುವನು. ಎರಡನೇ ಶತಮಾನದ ಅಂತಿಯೋಕ್ಯದ ಥೆಯೋಫಿಲನಿಗಾಗಿ, ಅಲೆಕ್ಸಾಂಡ್ರಿಯದ ಕ್ಲೆಮೆಂಟನಿಗಾಗಿ ತೆರ್ತುಲ್ಯನಿಗಾಗಿ (ಕ್ರಿ.ಶ. 155-225); ಒರಿಯನಿಗೂ; ಹೆಪಲೀತೋಸನಿಗಾಗಿಯೂ (ಹೋಲಿಸಿ ಕ್ರಿ.ಶ. 170-235) ಬರೆದಿರುವನು.

ಈ ಪುಸ್ತಕದ ಆಂತರಿಕ ಸಾಕ್ಷಿಗಳು ಒಂದು ನಿರ್ಣಯವನ್ನು ನೀಡಿ:[4] ಬರಹಗಾರನು ಒಬ್ಬ ಯೆಹೂದ್ಯನು, ಹಬ್ಬಗಳ ತಿಳುವಳಿಕೆವುಳ್ಳವನೂ, ಯೆಹೂದ್ಯ ಸಂಪ್ರದಾಯಗಳನ್ನು ಅರಿತವನೂ, ಸಮಾರ್ಯರ ಒಡನಾಟವಿದ್ದವನೂ ಎಂದು ತಿಳಿಸುತ್ತವೆ. ಪಾಲಿಸ್ತೇನಿನ ಯೆಹೂದಿಯಾಗಿದ್ದು, ಪಾಲೀಸ್ತೇನ್ ಹಾಗೂ ಯೊಸಲೇಮಿನ ಜ್ಞಾನ ಹೊಂದಿದವನೂ ಆಗಿದ್ದನು. ಅವನು ಬರೆದ ಅನೇಕ ಸಂಗತಿಗಳಿಗೆ, ಅವನೇ ಸಾಕ್ಷಿಯಾಗಿದ್ದನು (ನೋಡಿರಿ 1:14; 21:24). ಇದು ಯೋಹಾನನ ಕುರಿತಾದ ಪರಿಚಯವಾಗಿದೆ.[5]

ಯೋಹಾನನ ಜೀವನ ಚರಿತ್ರೆಯ ಕುರಿತು: ಇಬ್ರಿಯ ಭಾಷೆಯ "ಯೆಹೋವನು ಕೃಪಾಪೂರ್ಣನು" ಎಂಬದನ್ನು "ಯೋಹಾನನೆಂದು" ಕಿರಿದು ಮಾಡಲಾಗಿದೆ. ಜೆಬೆದಾಯ ಹಾಗೂ ಸಲೋಮಿ ಇವನ ತಂದೆ ತಾಯಿಗಳು (ಮಾರ್ಕ 1:19, 20; 16:1 [ಮಾರ್ಕ 16:1ನ್ನು ಮತ್ತಾಯ 27:56 ರೊಂದಿಗೆ ಹೋಲಿಸಿ]).[6] ಅವನು ಮತ್ತು ಅವನ ಸಹೋದರನಾದ ಯಾಕೋಬನು ಬೆಸ್ತರಾಗಿದ್ದರು (ಮಾರ್ಕ 1:19, 20), ಅವರು ಪೇತ್ರನೊಂದಿಗೆ ಪಾಲುದಾರರು (ಲೂಕ 5:10), ಅವನು ಸಂಮೃದ್ಧಿಯಾಗಿದ್ದನು. ಅವರು ಸೇವಕರನ್ನು ಹೊಂದಿದ್ದರು (ಮಾರ್ಕ

1:20), ರಾಜಕೀಯ ಸಂಬಂಧವನ್ನು ಹೊಂದಿದ್ದರು (ಯೋಹಾನನು ಮಹಾಯಾಜಕನನ್ನು ಬಲ್ಲವನಾದ್ದರಿಂದ, ಪೇತ್ರನನ್ನು ಯಾಜಕನ ಸನ್ನಿಧಿಗೆ ತಂದಿದ್ದನು [ಯೋಹಾನ 18:15, 16]).

ಒಂದು ವೇಳೆ ಇವನು (1:35-40) ಸ್ನಾನಿಕನಾದ ಯೋಹಾನನ ಶಿಷ್ಯನಾಗಿರಲೂ ಬಹುದು. ಹೇಗೂ, ಯೇಸು ಇವನನ್ನು ತನ್ನ ಶಿಷ್ಯರಲ್ಲಿ ಒಬ್ಬನನ್ನಾಗಿ ಕರೆದಿದ್ದನು (ಮತ್ತಾಯ 4:18-22). ನಂತರ ಹನ್ನೆರಡು ಅಪೊಸ್ತಲರಲ್ಲಿ ಒಬ್ಬನಾದನು (ಮತ್ತಾಯ 10:2). ಅವನು ಅಪೊಸ್ತಲರಲ್ಲಿ ಕಿರಿಯವನಾಗಿದ್ದನು.[7]

ಯೋಹಾನನು ಕರ್ತನೊಂದಿಗಿನ ವಿಶೇಷವಾದ ಆನಂದದ ಅನ್ಯೋನ್ಯತೆಯನ್ನು ಹೊಂದಿದ್ದನು, ಮೂರು ಜನ ಹತ್ತಿರವಾದವರಲ್ಲಿ ಒಬ್ಬನಾಗಿದ್ದನು (ಮಾರ್ಕ 5:37-40; 9:2; 14:33). ಕರ್ತನ ಭೋಜನದಲ್ಲಿ ವಿಶೇಷ ಪಂಕ್ತಿಯನ್ನು ಹೊಂದಿದ್ದನು (ಯೋಹಾನ 13:23). ಯೇಸುವಿನ ಸ್ತ್ರೀಯನಾದ ಶಿಷ್ಯನು ಎಂಬ ಬಿರುದನ್ನು ಹೊಂದಿದ್ದನು (13:23; 19:26; 20:2; 21:7, 20).

ಬಹಳ ಆಸಕ್ತಿವುಳ್ಳವನಾಗಿದ್ದು, ಯೇಸು ಅವನನ್ನು ಕರೆದ ಸಮಯದಲ್ಲಿ ಪರಾಕ್ರಮಶಾಲಿಯಾಗಿದ್ದನು (ಲೂಕ 9:49-56; ಮಾರ್ಕ 3:17). ಮಹತ್ವಕಾಂಕ್ಷೆವುಳ್ಳವ ನಾಗಿದ್ದನು (ಮಾರ್ಕ 10:35-37). ಕ್ರಿಸ್ತನು ಈ ಮನೋಭಾವದ ವ್ಯಕ್ತಿಯನ್ನು ತನಗಾಗಿ ಉಪಯೋಗಿಸಿಕೊಂಡನು. ತಾನು ಸಾಯುವ ಮೊದಲು ಯೇಸು ಇವನಿಗೆ ತನ್ನ ತಾಯಿಯ ಹೊಣೆಯನ್ನು ನೀಡಿದನು (ಯೋಹಾನ 19:25-27). ಆದ್ದರಿಂದ ಅವನು ಪ್ರೀತಿಯ ಅಪೊಸ್ತಲನಾದನು. (1 ಯೋಹಾನ ಪತ್ರಿಕೆಯಲ್ಲಿ "ಪ್ರೀತಿ" ಎಂಬ ಪದವನ್ನು ಐವತ್ತು ಸಾರಿ ಬಳಸಲಾಗಿದೆ.)

ಸಭೆಯು ಸ್ಥಾಪನೆಗೊಂಡ ನಂತರ, ಸಭೆಯಲ್ಲಿ ಯೋಹಾನನು ಪ್ರಮುಖಸ್ಥಾನವನ್ನು ಹೊಂದಿದನು (ಅಪೊಸ್ತಲರ ಕೃತ್ಯಗಳು 3:1; 4:19; 8:14; ಗಲಾತ್ಯ 2:9, 10). ಸಂಪ್ರದಾಯದ ಹೇಳಿಕೆಯ ಪ್ರಕಾರ ಎಫೆಸದಲ್ಲಿ ತನ್ನ ಕಡೇಯ ಸೇವೆಯನ್ನು ಮಾಡಿರುವನು. ಪ್ರಕಟನೆ ಗ್ರಂಥದ ಪ್ರಕಾರ, ರೋಮಾಯರಿಂದ ಹಿಂಸೆ ಉಂಟಾದ ಸಂದರ್ಭದಲ್ಲಿ, ಎಫೆಸದ ಏಗಿಯನ್ ಸಮುದ್ರದ ಬಳಿಯಲ್ಲಿದ್ದ ಪತ್ಮೋಸ್ ದ್ವೀಪದಲ್ಲಿದ್ದನು (ನೋಡಿರಿ ಪ್ರಕಟಣೆ 1:9; 2:1). ಆದಿ ಕ್ರೈಸ್ತರ ಪ್ರಕಾರ, ದೋಮಿತಾನನ ಮರಣದ ನಂತರ, ಅವನು ಎಫೆಸಕ್ಕೆ ಹಿಂದಿರುಗಿ, ಮರಣದ ತನಕ ಸೇವೆಮಾಡಿದನು.[8] ಪ್ರಾಯಶಃ ಅವನೇ ಸುವಾರ್ತೆಯನ್ನು ಇತರೆ ಮೂರು ಪತ್ರಿಕೆಗಳನ್ನು ಬರೆದಿರುವನು (1, 2, ಮತ್ತು 3ನೇ ಯೋಹಾನ).

**ಪುಸ್ತಕ ಬರೆದ ಕಾಲಮಾನ**

ಮೂರು ಸುವಾರ್ತೆಗಳು ಬರೆದ ನಂತರದಲ್ಲಿ, ಯೋಹಾನನ ಸುವಾರ್ತೆಯು ಬರೆಯಲ್ಪಟ್ಟಿತು ಎಂಬುದು ಆದಿ ಕ್ರೈಸ್ತ ಬರಹಗಾರರ ಹೇಳಿಕೆಯಾಗಿದೆ. ಇರೇನಿಯಸನು ಸಹ, "ಮತ್ತಾಯ, ಮಾರ್ಕ ಹಾಗೂ ಲೂಕನ ಪುಸ್ತಕಗಳನ್ನು ಬರೆದ ನಂತರ, ಯೋಹಾನ ಸುವಾರ್ತೆ ಬರೆಯಲ್ಪಟ್ಟಿತು ಎಂದಿರುವನು."[9]

ಯೋಹಾನನು ಏಕೆ ಕಡೇಯದಾಗಿ ತನ್ನ ಸುವಾರ್ತೆಯನ್ನು ಬರೆದನು?[10] ಪ್ರಾಯಶಃ ಇತರೆ ಮೂರು ಸುವಾರ್ತೆಗಳನ್ನು ದೃಢೀಕರಿಸಲು ಬರೆದಿರಬಹುದು. ಮತ್ತಾಯ, ಮಾರ್ಕ, ಹಾಗೂ ಲೂಕನ ಸುವಾರ್ತೆಯಲ್ಲಿ ದೊರಕಿದ ಮಾಹಿತಿಗಳನ್ನು ಆಧಾರಮಾಡಿಕೊಂಡು, ತನ್ನ ಸುವಾರ್ತೆಯನ್ನು ಬರೆದಿರುವನು.

ಮೊದಲನೆಯ ಮಾಹಿತಿಗಳನ್ನು ನೀಡಿದ ನಂತರ, ಉಂಟಾದ, ಅನೇಕ ಗೊಂದಲಗಳನ್ನು ಶಮನ ಮಾಡಲು ಬರೆದಿರುವನು. ಯೋಹಾನ ಹಾಗೂ 1ನೇ ಯೋಹಾನ ಪುಸ್ತಕಗಳನ್ನು ಹೋಲಿಕೆ ಮಾಡಿದಾಗ ಈ ಸಂಗತಿ ದೃಢವಾಗುತ್ತದೆ.[11] ಕ್ರಿಸ್ತನು (1 ಯೋಹಾನ 2:22),

ಕ್ರಿಸ್ತನಲ್ಲ ಎಂದು ಹೇಳಿದ ಕ್ರಿಸ್ತ ವಿರೋಧಿಗಳಿದ್ದರು (2 ಯೋಹಾನ 7; ಮತ್ತೇ ನೋಡಿ 1 ಯೋಹಾನ 4:2). ಭೂಮಂಡಲದಲ್ಲಿ ನಡೆದಾಡಿದ ಯೇಸು ನಿಜವಾದ ಕ್ರಿಸ್ತನಲ್ಲ ಎಂದಿದ್ದರು.[12] ಆದ್ದರಿಂದ ಯೋಹಾನನು "ವಾಕ್ಯವು [ಯೇಸು[13]] ನರಾವತಾರ *ಎತ್ತಿತ್ತು*; ನಮ್ಮೊಂದಿಗೆ ವಾಸ ಮಾಡಿದನು" (ಯೋಹಾನ 1:14ಎ; ಒತ್ತಿ ಹೇಳಿದ್ದು ನನ್ನದು) ಎಂದು ದೃಢಿಕರಿಸಿದನು. "*ಯೇಸು ಕ್ರಿಸ್ತನೇ* ಆಗಿದ್ದಾನೆ ಎಂದು ದೃಢೀಕರಿಸುವ ಕಾರಣದಿಂದ ತನ್ನ ತನ್ನ ವಿವರವನ್ನು ನೀಡಿರುವನು" (20:31; ಒತ್ತಿ ಹೇಳಿದ್ದ ನನ್ನದು).

ಮೇಲಿನ ಅಂಶವನ್ನು ಆಧಾರಮಾಡಿಕೊಂಡರೇ, ಮತ್ತಾಯ, ಮಾರ್ಕ ಹಾಗೂ ಲೂಕನ ಸುವಾರ್ತೆಗಳನ್ನು ಬರೆದು ಅನೇಕ ದಿವಸಗಳಾಗಿತ್ತು ಎಂದು ತಿಳಿದು ಬರುತ್ತದೆ, ಪ್ರಾಯಶಃ ಹಲವಾರು ವರ್ಷಗಳಾಗಿರಬಹುದು. ಕ್ರಿ.ಶ. 90ರಲ್ಲಿ ಈ ಪುಸ್ತಕ ಬರೆಯಲಾಗಿದೆ - ಎಂಬುದು ಹಲವಾರು ಬರಹಗಾರರ ಅಭಿಪ್ರಾಯವಾಗಿದೆ.[14]

### ಈ ಪುಸ್ತಕದ ಉದ್ದೇಶ

ಯೋಹಾನನ ಪುಸ್ತಕವು ನಿಖರವಾದ ಉದ್ದೇಶವನ್ನು ಹೊಂದಿರುತ್ತದೆ:

> ಯೇಸು ಇನ್ನು ಬೇರೆ ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ (20:30, 31).

ಯೋಹಾನ ಉದ್ದೇಶವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು:

(1) ಯೇಸುವಿನ ದೈವತ್ವವನ್ನು ಸ್ಥಾಪನೆ ಮಾಡುವ ಉದ್ದೇಶದಿಂದ ಬರೆಯಲಾಗಿದೆ. "ಆ ಯೇಸುವೇ ಕ್ರಿಸ್ತನು, ದೇವರ ಮಗನು, ಆತನು ದೇವರ ಒಬ್ಬನೇ ಮಗನು" (3:16). ಪ್ರತಿ ಪುಟದಲ್ಲೂ ಯೇಸುವಿನ ದೈವತ್ವವೂ ಎದ್ದುಕಾಣುತ್ತದೆ (ನೋಡಿರಿ 1:1; 8:58; 10:30; 14:9; 20:28). ಯೋಹಾನನ್ನು ತನ್ನ ಲೇಖನಿಯನ್ನು ಶಾಹಿಯಲ್ಲಿ ಅದ್ದಿ ಬರೆಯುವ ಮುನ್ನ: "ನಾನು ಬರೆಯುವ ಸಂದೇಶದಿಂದ, ಜನರು ನಿನ್ನ ಸಮೀಪಕ್ಕೆ ಬರಲಿ" ಎಂದು ಪ್ರಾರ್ಥಿಸಿರುವನು ಎಂಬ ಹೇಳಿಕೆಯಿದೆ.[15]

ಯೇಸು ಮಾಡಿದ ಅದ್ಭುತಗಳ ಕುರುಹನ್ನು ಯೋಹಾನನ್ನು ನೀಡಿರುವನು. ಈ ಅದ್ಭುತ ಗಳನ್ನು ಯೋಹಾನನು "ಸೂಚಕ ಚಿಹ್ನೆ" ಎಂದಿರುವನು (20:30; ಇದನ್ನು ನೋಡಿ 2:11; 4:54; 6:2):[16] ಯೇಸು ಕ್ರಿಸ್ತನು ಹೇಳಿದ ಸಂಗತಿಗಳು ಸತ್ಯವಾದವು ಎಂಬುದಕ್ಕೆ ಅವುಗಳು ಸಾಕ್ಷಿಯಾಗಿದ್ದವು (2:23; 3:2; 4:54; 6:14). ಯೇಸು ಮಾಡಿದ ಎಲ್ಲಾ ಅದ್ಭುತಗಳಿಂದ ಯೋಹಾನನು ಏಳು ಅದ್ಭುತಗಳನ್ನು ಆರಿಸಿಕೊಂಡನು (2:1-11; 4:46-54; 5:1-9; 6:14 [ನೋಡಿರಿ ವಚನಗಳು 26 ಮತ್ತು 30], 16-21; 9:1-41; 11:1-45). ಇತರೆ ಮೂರು ಸುವಾರ್ತೆಗಳಲ್ಲಿ ಏಳರಲ್ಲಿ, ಎರಡು ಅದ್ಭುತಗಳನ್ನು ಕಾಣುತ್ತೇವೆ. ಉಳಿದ ಐದು ಯೋಹಾನನ ಬರವಣಿಗೆಯಲ್ಲಿವೆ. ಯೋಹಾನನ ಆಯ್ಕೆಯ ಕುರಿತು ಮೆರಿಲ್ ಟೆನ್ನಿಯವರು, "ಮನುಷ್ಯನ ಜೀವಿತವನ್ನು ಬದಲು ಮಾಡಲು ನಿಯಮಗಳಿಗೆ ಸಾಧ್ಯವಿಲ್ಲದೆ ಇರುವಂಥ ಸಂದರ್ಭದಲ್ಲಿ, ಈ ಏಳು ಮಹತ್ಕಾರ್ಯಗಳು ಕಾರ್ಯ ನಿರ್ವಯಿಸುತ್ತವೆ ಎಂದಿರುವರು, ಮಾನವ ಕೈಯಲ್ಲಿ ಆಗದೆ ಇರುವದನ್ನು ಯೇಸು ಸಾಧಿಸಿರುವನು ..."[17]

(2) ಯೇಸುವಿನಿಂದ ನಂಬಿಕೆ ಉಂಟಾಗಬೇಕೆಂದು ಯೋಹಾನನು ಬರೆದನು: "ನಂಬಿಕೆ" ಎಂಬ ಪದವು ವಿವಿಧ ರೀತಿಯಲ್ಲಿ ಸುಮಾರು ನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿರುತ್ತದೆ. "ನಾನು ಕಳುಹಿಸಲ್ಪಟ್ಟವನೇ" [ಕ್ರಿಸ್ತನು] ಎಂದು ನಂಬದಿದ್ದರೆ, ನೀವು

ನಿಮ್ಮ ಪಾಪದಲ್ಲೇ ಸಾಯುವಿರಿ" ಎಂದು ಯೇಸು ತಿಳಿಸಿದನು (8:24ಬಿ).

"ನಂಬಿಕೆ" ಎಂದರೆ "ಕೇವಲ" ಜ್ಞಾನದಲ್ಲಿ ಬದಲಾವಣೆ ಎಂಬ ಅರ್ಥವಲ್ಲ. 1:12ರಂತೆ ನಂಬಿಕೆಯ ಕ್ರಮದಿಂದ ಉಂಟಾಗುವ ಆಂತರಿಕ ಬದಲಾವಣೆ: "ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ *ನಂಬಿಕೆಯಿಟ್ಟರೋ,* ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು" (ಒತ್ತಿ ಹೇಳಿದ್ದು ನನ್ನದು). ಯೇಸುವಿನಲ್ಲಿ ನಂಬಿಕೆ ಎಂದರೆ, ಪ್ರಶ್ನೆ ಇಲ್ಲದೆ ಆತನನ್ನು ಅಂಗೀಕರಿಸುವದು. 3:36ರಲ್ಲಿ, ಆಂತರಿಕವಾಗಿ ನಂಬಿ, ವಿಧೇಯರಾಗುವ ಕುರಿತು ಬರೆದು: "ನಂಬುವವನಿಗೆ ನಿತ್ಯಜೀವವುಂಟು, ವಿಧೇಯನಾಗದವನಿಗೆ ನಿತ್ಯ ಜೀವವಿಲ್ಲ, ಆದರೆ ಅವನ ಮೇಲೆ ದೇವರ ಕೋಪವು ನೆಲೆಗೊಂಡಿರುವದು." ನಿಜವಾದ ನಂಬಿಕೆಯು, ವಿಧೇಯತೆಯನ್ನು ಪ್ರಕಟಿಸುತ್ತದೆ. "ನಂಬಿಕೆ" 2:24ರ ಪದವನ್ನು ಗ್ರೀಕ್ ಭಾಷೆಯಲ್ಲಿ "ಭರವಸೆ" ಎಂದು ಅರ್ಥೈಸಲಾಗಿದೆ.[18] ರಕ್ಷಿಸಲ್ಪಡಬೇಕೆಂದಿರುವವನು. ಸ್ವಾರ್ಥದಲ್ಲಿ ನಂಬಿಕೆ ಇಡದೆ, ಯೇಸುವಿನ ಯಜ್ಞದಲ್ಲಿ "ಭರವಸ"ವಿಡಬೇಕು.

(3) ಜನರು ಜೀವವನ್ನು ಹೊಂದಬೇಕೆಂದು ಯೋಹಾನನು ಬರೆದನು: "ನಂಬುವದರಿಂದ, ಯೇಸುವಿನಲ್ಲಿ ಜೀವ ಪಡೆಯುವಿರಿ." ಜೀವ ಎಂದರೆ ಉಸಿರಾಡುವದು ಹಾಗೂ ದೇಹದ ಇತರೆ ಚಟುವಟಿಕೆಗಳು ಎಂಬ ಅರ್ಥವಲ್ಲ. ರಕ್ಷಣೆಯ ಮೂಲಕ ದೊರಕುವ ಸಕಲ ಆಶೀರ್ವಾದವಾಗಿದೆ.[19] ಯೋಹಾನ 17ರ ಯೇಸುವಿನ ಪ್ರಾರ್ಥನೆಯಲ್ಲಿ, "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು" (17:3).

ಯೋಹಾನನ ಸುವಾರ್ತೆಯನ್ನು "ಸಾರ್ವತ್ರಿಕ ಸುವಾರ್ತೆ" ಎಂದು ಕರೆಯಲಾಗಿದೆ. ಆತನು ವಿವರಿಸಿದ ಯೆಹೂದ್ಯ ಸಂಪ್ರದಾಯವು (ಉದಾಹರಣೆ ನೋಡಿರಿ 2:13; 4:9; 19:31), ಯೆಹೂದ್ಯರನ್ನು ಹಾಗೂ ಇತರರನ್ನು ತಲುಪಿತ್ತು. ಅದರಲ್ಲಿ ಸಾರ್ವತ್ರಿಕ ಅಭಿಪ್ರಾಯವಿರುವದರಿಂದ, ಅದನ್ನು ಪ್ರತ್ಯೇಕವಾಗಿ ಮುದ್ರಿಸಿ, ಲೋಕಕ್ಕೆ ವಿತರಿಸಲಾಗಿದೆ, ಇದು ಪ್ರಸಿದ್ಧ ಪಡೆದ, ಪ್ರಚಲಿತ ಬರವಣಿಗೆಯಾಗಿದೆ.

**ಈ ಪುಸ್ತಕದ ಗುಣಲಕ್ಷಣಗಳು**

ಯೋಹಾನನ ಪುಸ್ತಕದ ಅನೇಕ ಗುಣ ಲಕ್ಷಣಗಳನ್ನು ಈಗಾಗಲೇ ತಿಳಿಸಲಾಗಿದೆ. ಇತರೆ ಗುಣಲಕ್ಷಣಗಳು ಸಹ ಒಂದೇ ಉದ್ದೇಶವನ್ನು ಹೊಂದಿದೆ.

ಏಳು "ಸೂಚನೆಗಳ" ಸಂಗಡ ಯೇಸು ಹೇಳಿದ "ನಾನೇ" ಎಂಬ ಅಧಿಕವಾದ ಧೈವೀಕ ಹೇಳಿಕೆಗಳಿವೆ (6:35; 8:12, 58; 10:11; 11:25; 14:6; 5:1).[20]

ಇತರೆ ಮೂರು ಸುವಾರ್ತೆಗಳಲ್ಲಿ ಇರದ, ವಿಚಾರಗಳನ್ನು, ಯೋಹಾನನು ಆಳವಾಗಿ ಚಿತ್ತರಿಸಿದ್ದಾನೆ.

ಯೋಹಾನನು ಯೇಸುವನ್ನು ಒಬ್ಬ ಸಾರ್ವಜನಿಕ ವ್ಯಕ್ತಿಯನ್ನಾಗಿ ಪ್ರಕಟಿಸದೆ, ವ್ಯಯಕ್ತಿಕವಾಗಿ ಸಂಧಿಸುವ ಯೇಸುವನ್ನಾಗಿ ಪ್ರಕಟಿಸಿರುವನು - ಉದಾಹರಣೆಗೆ ನಿಕೋದೇಮನೊಂದಿಗೆ (ಅಧ್ಯಾಯ 3), ಸಮಾರ್ಯ ಸ್ತ್ರೀಯೊಂದಿಗೆ (ಅಧ್ಯಾಯ 4) ಇದೇ ವಿಧದ ಇಪ್ಪತ್ತೇಳು ಘಟನೆಗಳನ್ನು ಯೋಹಾನನು ದಾಖಲಿಸಿರುವನು.

ಯೋಹಾನನು ವಿವಿಧವಾದ ವ್ಯಕ್ತಿತ್ವಗಳನ್ನು ಚಿತ್ರಿಸಿರುವನು, ನಿಕೋದೇಮ (3:1-15; 7:50-52; 19:39), ಫಿಲಿಪ್ಸ್ (1:43-46; 6:5-7; 14:8-11), ತೋಮನು (11:16; 14:5, 6; 20:24-29), ಮತ್ತು ಮೆರಿಯಳು, ಮಾರ್ಥಳು (11:1-40; 12:2-8). ಇವರಲ್ಲಿ ನಂಬಿಕೆಯು ವೃದ್ಧಿಯಾದ ವಿಚಾರಗಳನ್ನೇ ಗಮನಿಸುತ್ತೇವೆ.

ಸುವಾರ್ತೆಗಳೆಲ್ಲವು ಸಹ, ಕ್ರಿಸ್ತನ ಮರಣ, ಹೂಣಿಡುವಿಕೆ, ಹಾಗೂ ಪುನರುತ್ಥಾನಗಳ ಕುರಿತು ಹೆಚ್ಚಿನ ಆಧ್ಯತೆಯನ್ನು ನೀಡಿರುವದಾದರೆ, ಯೋಹಾನನು ಇನ್ನೂ ಅಧಿಕವಾದ

ಮಹತ್ವವನ್ನು ನೀಡಿರುವನು. ಶೇಕಡ ಐವತ್ತರಷ್ಟು ಕ್ರೂಜೆಯ ಬಗ್ಗೆ ತಿಳಿಸಲಾಗಿದೆ. ಪ್ರತಿಯೊಂದು ಘಟನೆಗಳು ಸಹ "ಗಳಿಗೆ" ಎಂಬುದರ ಬಳಿಗೆ ಚಲಿಸುತ್ತವೆ (2:4; 4:21, 23; 5:25, 28; 7:30; 8:20; 12:23, 27; 13:1).

ಯೋಹಾನನಲ್ಲಿರುವ ಇತರೆ ಸಂಗತಿಗಳೇನೆಂದರೆ: ಯೋಹಾನನು ಮಾತ್ರ "ಹೊಸ ಜನನದ" ಬಗ್ಗೆ ತಿಳಿಸಿರುವನು (3:3, 5). ಈ ಪ್ರಸ್ತಾಪವನ್ನೇ ಯೋಹಾನನು ತನ್ನ ಮೊದಲ ಪತ್ರಿಕೆಯಲ್ಲಿ ಮುಂದುವರೆಸಿರುವನು (1 ಯೋಹಾನ 2:29; 3:9; 4:7; 5:1, 4, 18). ಅಪೊಸ್ತಲರನ್ನು ಮುನ್ನೆಡೆಸಲು ಪವಿತ್ರಾತ್ಮನು ಬರುವನೆಂದು ಮುಂದಾಗಿ ತಿಳಿಸಿದನು (14:16, 17, 26; 15:26; 16:13, 14).

**ಪುಸ್ತಕದ ವಿಭಾಗಗಳು**

ಯೇಸುವಿನ ಆರಂಭದ ಸೇವೆಯ ಕುರಿತಾಗಿಯ ಯೋಹಾನನು ನಿಖರವಾಗಿ ತಿಳಿಸಿರುವನು. ಇತರೆ ಮೂರು ಸುವಾರ್ತೆಗಳು ಯೇಸುವಿನ ಗಲಿಲಾಯದ ಮಹಾ ಸೇವೆಯ ಕುರಿತಾಗಿ ಬರೆದಿದ್ದರೆ, ಯೋಹಾನನು ಯೇಸು ಮಾಡಿದ ಯೆರೂಸಲೇಮಿನ ಹಾಗೂ ಯುದಾಯದಲ್ಲಿನ ಸೇವೆಯ ಬಗ್ಗೆ ತಿಳಿಸಿರುವನು. ಗಲಿಲಾಯದ ಸೇವೆಯ ಸಮಯದಲ್ಲಿ ಯೇಸು ಯೆರೂಸಲೇಮಿಗೆ ಹೋದ ಸಂಗತಿಯನ್ನು ಯೋಹಾನನು ತಿಳಿಸಿರುವನು. ಇದರ ಪರಿಣಾಮವಾಗಿ ಯೋಹಾನನು ಮೂರು ಪಸ್ಕ ಹಬ್ಬಗಳ ಬಗ್ಗೆ ದಾಖಲಿಸಿರುವನು (2:13; 6:4; 11:55-57; 5:1?).[21] ಯೋಹಾನ ಪುಸ್ತಕದ ಪ್ರತಿ ವಿಭಾಗಗಳಲ್ಲೂ, ಯೆರೂಸಲೇಮಿನ ಕಾರ್ಯದ ಬಗ್ಗೆ ತಿಳಿಸಲಾಗಿದೆ.

ಯೇಸುವಿನ ಅಪೊಸ್ತಲರ ಕುರಿತಾದ ಬೋಧನೆಗಳು ವಿಸ್ತಾರವಾಗಿರುವ ಕಾರಣ; ಯೋಹಾನ 13 ರಿಂದ 17ರ ಭಾಗವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ: (1) ಯೇಸುವಿನ ಸಾರ್ವಜನಿಕ ಸೇವೆ (1:19-12:50); (2) ಯೇಸುವಿನ ಖಾಸಗಿ ಸೇವೆ (13:1-17:26); (3) ಯೇಸುವಿನ ಸಾರ್ವತ್ರಿಕ ಸೇವೆ (ಆತನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನ) (18:1-21:25). ಟೆನ್ನಿಯವರು ತಿಳಿಸಿದ ಯೇಸುವಿನ ಸಾರ್ವಜನಿಕ ಸೇವೆಯ ಕುರಿತು ತಮ್ಮ ಪ್ರಮುಖ ಅಂಶಗಳನ್ನೂ ತಿಳಿಸಿದರು. ಶಾಕೆಲ್ ಫೋರ್ಡ್‌ರವರು ಟೆನ್ನಿಯವರ ಅಂಶಗಳನ್ನು ಆಧಾರಮಾಡಿಕೊಂಡು ತಮ್ಮ ಮುಖ್ಯಾಂಶಗಳನ್ನು ನೀಡಿರುವರು:[22] ಮುನ್ನುಡಿ (1:1-18); ಯೇಸು ಪ್ರತಿಪಾದಿಸಿದ ವಿಚಾರ (1:19-4:54), ಯೆಹೂದ್ಯರೊಂದಿಗೆ ಭಿನ್ನಾಭಿಪ್ರಾಯ (5:1-6:71). ಯೆಹೂದ್ಯ ರೊಂದಿಗೆ ಘರ್ಷಣೆ (7:1-11:53); ಆತನು ಪ್ರತಿಪಾದಿಸಿದ ಸಂಗತಿಗಳ ಕುರಿತ ವಾಗ್ವಾದ (11:54-12:36); ಶಿಷ್ಯರೊಂದಿಗಿನ ಸಮ್ಮೇಳನ (12:37-17:26); ಯೇಸುವಿನ ಕಾರ್ಯಗಳ ಈಡೇರಿಕೆ (18:1-20:31); ಮುಕ್ತಾಯ (21:1-25).[23]

ಯೋಹಾನನ ಪುಸ್ತಕದ ಅರ್ಧಭಾಗದಲ್ಲಿ ಯೇಸುವಿನ ಮರಣದ ಕುರಿತಾಗಿಯೇ ತಿಳಿಸಲಾಗಿದೆ, ಅದರಲ್ಲಿ ಎರಡು ಪ್ರಮುಖ ಭಾಗಗಳನ್ನು ನಾನು ತೋರಿಸಿರುವೆನು: (1) ಯೇಸುವಿನ ಸಾಮಾನ್ಯವಾದ ಸೇವೆ ಮತ್ತು (2) ಆತನ ಸೇವೆಯ ಕಡೇಯ ವಾರ, ಅದರಲ್ಲಿ ಆತನ ಮರಣವೇ ಪ್ರಮುಖವಾಗಿತ್ತು. ಮೊದಲ ಭಾಗದಲ್ಲಿ ಆತನ ಯೆರೂಸಲೇಮಿನ ಹಾಗೂ ಯುದಾಯದ ಪ್ರಯಾಣದ ಕುರಿತಾಗಿರುತ್ತದೆ. ಎರಡನೇ ಭಾಗದಲ್ಲಿ ಎರಡು ಪ್ರಮುಖ ವಿಭಾಗಗಳಿವೆ: (1) ಅಧ್ಯಾಯ 13 ರಿಂದ 17ರವರೆಗೆ ಯೇಸು ತನ್ನ ಶಿಷ್ಯರಿಗೆ ನೀಡಿದ ಅಂತಿಮ ಮಾತುಗಳು. (2) ಶಿಲುಬೆಗೆ ಸಂಬಂಧ ಪಟ್ಟ ಘಟನೆಗಳು.

## ಯೋಹಾನನ ಪುಸ್ತಕದ ಪ್ರಮುಖ ಅಂಶಗಳು

ಪರಿಚಯ (ಪೀಠಿಕೆ) (1:1-18).

A. ಯೇಸುವಿನ ನಿಖರತೆ (ನೋಡಿರಿ ವಚನಗಳು 1-5, 14, 16-18).

B. ಸ್ನಾನಿಕನಾದ ಯೋಹಾನನ ಸಾಕ್ಷಿ (ನೋಡಿ ವಚನಗಳು 6-8, 15).

I. ದೇವಕುಮಾರನ ಸೇವೆ: ಮೂರು ವರ್ಷಗಳ ಕಾಲದ ಸಿದ್ಧತೆ (1:19-11:57).

A. ಆರಭದ ಸೇವೆ (1:19-2:12).

1. ಆತನ ಪ್ರಥಮ ಶಿಷ್ಯರು (1:19-51).
   a. ಸಾಕ್ಷಿ: "ಇಗೋ ದೇವರ ಕುರಿಮರಿ!" - ಯೇಸುವಿನ ದೀಕ್ಷಾಸ್ನಾನದ ವಾಕ್ಯ.
   b. ಶಿಷ್ಯರು: ಅಂದ್ರೇಯ ಪೇತ್ರ, ಫಿಲಿಪ್ಪ, ನತಾನಿಯೇಲ (ಮತ್ತು ಯೋಹಾನ?).
2. ಆತನ ಮೊದಲ ಅದ್ಭುತ (2:1-11).
3. ಕಪೆರ್ನೌಮನ್ನು ಮೊದಲಿ ಸಂಧಿಸಿದ್ದು (2:12).

B. ಯುದಾಯದ ಆರಂಭದ ಸೇವೆ (2:13-3:36).

1. ಯೆರೂಸಲೇಮಿಗೆ: *ಪಸ್ಕ* (ಆತನ ಸೇವಾ ಅವಧಿಯಲ್ಲಿನ ಪ್ರಥಮ ಪಸ್ಕ) (2:13).
2. ಯೆರೂಸಲೇಮಿನಲ್ಲಿ (2:14-3:21):
   a. ಲೇವಾದಾರರನ್ನು ಹೊರಡಿಸಿದ್ದು (2:14-17).
   b. ಪುನರುತ್ಥಾನ ಕುರಿತ ಉಪದೇಶ (2:18-22).
   c. ಅದ್ಭುತಗಳನ್ನು ನಡೆಸಿದ್ದು (2:23-25).
   d. ನಿಕೋದೇಮನಿಗೆ ಉಪದೇಶಿಸಿದ್ದು (3:1-21) ಹೊಸ ಜನನದ ಸವಾಲು.
3. ಯುದಾಯದಲ್ಲಿ (3:22-36):
   a. ಯೇಸುವಿನ ಹಾಗೂ ಆತನ ಶಿಷ್ಯರ ಯಶಸ್ಸು (3:22; ಮತ್ತೆ ನೋಡಿರಿ 4:1).
   b. ಯೋಹಾನನ ಶಿಷ್ಯರ ಅಸೂಯೆ (3:23-36).

C. ಗಲಿಲಾಯದ, ಯುದಾಯ ಹಾಗೂ ಇತರೆ ಸ್ಥಳಗಳಲ್ಲಿನ ಸೇವೆ (4:1-11:54).

1. ಗಲಿಲಾಯದ, ಹಾದಿಯಲ್ಲಿ (4:1-45).
   a. ಪ್ರಯಾಣದ ಆರಂಭ (4:1-3).
   b. ಪ್ರಯಾಣದ ಮಧ್ಯದಲ್ಲಿ ಬಾವಿಯ ಬಳಿಯಲ್ಲಿನ ಸಮಾರ್ಯ ಸ್ತ್ರೀ (4:4-42).
   c. ಪೂರ್ವಗೊಂಡ ಪ್ರಯಾಣ (4:43-45).
2. ಗಲಿಲಾಯದಲ್ಲಿ ಒಬ್ಬ ಅಧಿಕಾರಿಯ ಮಗನ ಸ್ವಸ್ಥತೆ (4:46-54).
3. ಹಬ್ಬದ ಆಚರಣೆಗೆ ಯೆರೂಸಲೇಮಿಗೆ ಹಿಂದಿರುಗಿದ್ದು *(ಎರಡನೇ ಪಸ್ಕ?)* (5:1-47).
   a. ಒಬ್ಬ ಕುಂಟನ ಸ್ವಸ್ಥತೆ - ಹಗೆತನ (5:1-17).
   b. ಯೇಸುವಿನ, ದೇವರೊಂದಿಗಿನ ಸಮಾನತೆಯ ಹೇಳಿಕೆ - ಮತ್ತು ಸಾಕ್ಷಿಗಳು (5:18-47).
      (1) ಯೋಹಾನನ ಸಾಕ್ಷಿ.

(2) ಯೇಸುವಿನ ಅದ್ಭುತಗಳ ಸಾಕ್ಷಿ.
(3) ದೇವರ ಸಾಕ್ಷಿ.
(4) ಗ್ರಂಥಗಳ ಸಾಕ್ಷಿ.

4. ಪುನಃ ಗಲಿಲಾಯಕ್ಕೆ (6:1-71):
   a. ಐದು ಸಾವಿರ ಜನರಿಗೆ ಊಟ ನೀಡಿದ್ದು - ಜನರು ಆತನನ್ನು ಅರಸನನ್ನಾಗಿ ಮಾಡಬೇಕೆಂದು ಪ್ರಯತ್ನಿಸಿದ್ದು (6:1-15) (6:4 *ಪಸ್ಕ - ಮೂರನೆಯದೇ?*)
   b. ನೀರಿನ ಮೇಲೆ ನಡೆದದ್ದು - ಜನರು ಆಶ್ಚರ್ಯಪಟ್ಟದ್ದು (6:16-25).
   c. ಜೀವಕರವಾದ ರೊಟ್ಟಿಯ ಕುರಿತ ಉಪದೇಶ: ಜನರು ಆತನನ್ನು ಬಿಟ್ಟು ಹೋದರು (6:26-71).
      (1) ಅನೇಕರು ಬಿಟ್ಟು ಹೋದರು (ವಚನ 66).
      (2) ಕೆಲವರು ಉಳಿದರು (ವಚನಗಳು 67, 68).
      (3) ಒಬ್ಬನು ಅಲ್ಲಗಳೆದದ್ದು (ವಚನಗಳು 64, 70, 71).
5. ಪರ್ಣ ಶಾಲೆಗಳ ಹಬ್ಬಕ್ಕಾಗಿ ಯೆರೂಸಲೇಮಿಗೆ ಹಿಂದಿರುಗಿದ್ದು (7:1-10:21).
   a. ಹಬ್ಬಕ್ಕೆ ಹೋದದ್ದು, ಆತನ ಸಹೋದರರ ಅಪನಂಬಿಕೆ (7:1-13).
   b. ಹಬ್ಬದ ಸಮಯದಲ್ಲಿ ಉಪದೇಶ, ಜೀವಕರವಾದ ನೀರು, ಆತನ ಕೇಳುಗರು ಕೇಳದೆ ಇರುವ ಅನಿಶ್ಚಯತೆಯ ಉಪದೇಶ (7:14-53).
   c. ಹಬ್ಬದಲ್ಲಿ ಉಂಟಾದ ಸವಾಲು - ಆತನ ಮೃದುವಾದ ಹೃದಯ ವ್ಯಭಿಚಾರಿ ಸ್ತ್ರೀಯ ಬಗ್ಗೆ ಮೃದು ದೋರಣೆ (8:1-11).
   d. ಹಬ್ಬದ ಸಮಯದಲ್ಲಿ ಹೆಚ್ಚಿನ ಉಪದೇಶ - ಜನರ ಅಕ್ರೋಶ ಆತನ ವೈರಿಗಳು (8:12-59).
   e. ಹಬ್ಬದ ಸಮಯದಲ್ಲಿ ಸ್ವಸ್ಥತೆ ಹುಟ್ಟು ಕುರುಡನ ಸ್ವಸ್ಥತೆ - ಆತನ ವೈರಿಗಳಿಗೆ ಉಂಟಾದ ವೈರತ್ವ (9:1-41).
   f. ಒಳ್ಳೆಯ ಕುರುಬನ ದೃಷ್ಟಾಂತ - ಆತನ ಕೇಳುಗರ ಗೊಂದಲ (10:1-21).
6. ಸಮರ್ಪಣೆಯ ಹಬ್ಬಕ್ಕಾಗಿ ಯುದಾಯಕ್ಕೆ ತೆರಳಿದ್ದು (10:22-42).
   a. ಯೆರೂಸಲೇಮಿನಲ್ಲಿ ಉಪದೇಶ - ಮತ್ತು ಅಪನಂಬಿಕೆ (10:22-39).
   b. ಯೋರ್ದಾನಿನ ಆಚೆಗೆ ತೆರಳಿದ್ದು (ಪೆರಿಯಕ್ಕೆ) ಮತ್ತು ನಂಬಿಕೆ (10:40-42).
7. ಬೆಥಾನ್ಯಕ್ಕೆ (ಯೆರೂಸಲೇಮಿನ ಬಳಿ) ಹೋಗಿ ಸ್ನೇಹಿತರಿಗೆ ಸಹಾಯಿಸಿದ್ದು (11:1-46):
   a. ಒಂದು ಒತ್ತಾಯದ ಮನವಿ (11:1-17).
   b. ಪುನರುತ್ಥಾನದ ದೃಢೀಕರಣ (11:18-45).
   c. ಮುಂದಾಗಲಿದ್ದ ಪ್ರತಿಕ್ರಿಯೆ (11:46-53).
8. ಉತ್ತರದ ಯುದಾಯಕ್ಕೆ ತೆರಳಿದ್ದು (ಎಫ್ರಾಯಿಮ್) (11:54).

D. ಸೇವೆಯ ಅಂತ್ಯದ ಕಾಲ: *ಅಂತಿಮವಾದ ಪಸ್ಕ (ನಾಲ್ಕನೆಯದೇ?)* (11:55-57).

II. ದೇವಕುಮಾರನ ಸೇವೆ: ವೇದನೆಗಳ ಒಂದು ವಾರ (12:1-20:29).

A. ಯೇಸು ಯೆರೂಸಲೇಮಿಗೆ ಹೋದದ್ದು (12:1-50).
   1. ಬೇಥಾನ್ಯದಲ್ಲಿ ಅಭಿಷೇಕ (12:1-11).
   2. ಯೆರೂಸಲೇಮಿಗೆ ವಿಜಯದ ಪ್ರವೇಶ (12:12-19).
   3. ಯೆರೂಸಲೇಮಿನಲ್ಲಿ ಉಪದೇಶ (12:20-50).

B. ಯೇಸು ತನ್ನ ಶಿಷ್ಯರೊಂದಿಗೆ (13:1-17:26).
   1. ಕಡೇಯ ಭೋಜನ (13:1-38).
      a. ಪಾದಗಳನ್ನು ತೊಳೆದದ್ದು.
      b. ಹಿಡಿದು ಕೊಡುವ ಕುರಿತು ಮುಂದಾಗಿ ತಿಳಿಸಿದ್ದು.
   2. ವಿದಾಯದಲ್ಲಿ ನೀಡಿದ ಅಂತಿಮ ವಚನಗಳು (14:1-16:33): ಯೇಸು ಉಪದೇಶಿಸಿ ...
      a. ಆತನ ಮರಣ.
      b. ದ್ರಾಕ್ಷೆ ಬಳ್ಳಿ ಹಾಗೂ ಕೊಂಬೆಗಳು.
      c. ಪವಿತ್ರಾತ್ಮನ ಆಗಮನ.
   3. ಐಕ್ಯತೆಯ ಪ್ರಾರ್ಥನೆ 17:1-26.

C. ಶಿಲುಬೆಯ ನ್ನೆಲಿದ ಯೇಸು (18:1-19:42).
   1. ಆತನ ವಿಚಾರಣೆ (18:1-19:15).
      a. ಯೂದನು ಆತನನ್ನು ಹಿಡುಕೊಟ್ಟದ್ದು (18:1-11).
      b. ಅನ್ನ ಮತ್ತು ಕಾಯಿಫನಿಂದ ವಿಚಾರಣೆ (18:12-24).
      c. ಪೇತ್ರನು ನಾನಾರಿಯೆನೆಂದು ಹೇಳಿದ್ದು (18:25-27).
      d. ಪಿಲಾತನ ಮುಂದೆ ವಿಚಾರಣೆ (18:28-40).
      e. ಸಿಪಾಯಿಗಳು ಆತನನ್ನು ಹೊಡೆದದ್ದು (19:1-15).
   2. ಕ್ರೂಜಿತನಾದದ್ದು (19:16-30).
   3. ಆತನ ಹೂಣಿಡುವಿಕೆ (19:31-42).

D. ಯೇಸು ಪುನರುತ್ಥಾನ ಹೊಂದಿದ್ದು (20:1-29).
   1. ಮಗ್ದಲದ ಮರಿಯಳಿಗೆ ಪ್ರತ್ಯಕ್ಷವಾದದ್ದು (20:1-18).
   2. ಆತನ ಶಿಷ್ಯರಿಗೆ ಪ್ರತ್ಯಕ್ಷವಾದದ್ದು (20:19-29).

ಮುಕ್ತಾಯ (20:30-21:25).

A. ಉದ್ದೇಶದ ಹೇಳಿಕೆ (20:30, 31).

B. ಪೇತ್ರನಿಗೆ ಒಂದು ವಿಶೇಷ ಪಾಠ (ಗಲಿಲಾಯದ ಬಳಿ ಪ್ರತ್ಯಕ್ಷ) (21:1-17).

C. ಬರಹಗಾರನ ಕುರಿತ ಒಂದು ಹೇಳಿಕೆ (21:18-24).

D. ಕ್ರಿಸ್ತನ ಜೀವನ ಚರಿತ್ರೆ ಕುರಿತ ಒಂದು ಅಂತಿಮವಾದ ಹೇಳಿಕೆ (21:25).

---

ಟಿಪ್ಪಣಿಗಳು

[1]ವಚನ 20 ರಿಂದ 23ರಲ್ಲಿ "ಯೇಸುವನ್ನು ಪ್ರೀತಿಸುವ ಶಿಷ್ಯನು" ದೀರ್ಘಕಾಲವಾಗಿ ಜೀವಿಸುವನೆಂದು ಸೂಚಿಸಲಾಗಿದೆ. ಇದು ಯೋಹಾನನು ಈ ಪುಸ್ತಕವನ್ನು ಬರೆದನೆಂಬುದಕ್ಕೆ ಅಂತರಂಗದ ರುಜುವಾತಾಗಿದೆ ಎಕೆಂದರೆ ದೈವ ಪ್ರೇರೇಪಣೆ ಇಲ್ಲದ ಸಂಪ್ರದಾಯಕ ಪ್ರಕಾರ ಸ್ವಭಾವಿಕವಾಗಿ ಮರಣ ಹೊಂದಿದ ಒಬ್ಬನೇ ಅಪೊಸ್ತಲನು ಯೋಹಾನನಾಗಿದ್ದಾನೆ. [2]ಬರಹಗಾರನಾದ ಯೋಹಾನನ ಬಗ್ಗೆ ಗೊಂದವಿದೆ. ಹೇಗಿದ್ದರೂ ಇದಕ್ಕೆ ಯಾವ ರುಜು ವಾತು ಇಲ್ಲ. ಪಾಪಾಯಸನು

ಇಬ್ಬರು ಭಿನ್ನವಾದ ಯೋಹಾನರನ್ನು ಸೂಚಿಸಿದ್ದಾನೆ - ಹಾಗಿದ್ದರೆ ನಾಲ್ಕನೇಯ ಸುವಾರ್ತೆಯ ಬರಹಗಾರ ಅಪೊಸ್ತಲನಾದ ಯೋಹಾನನನಲ್ಲವೆಂದು ನಂಬಿರಬೇಕು. [3]Irenaeus *Against Heresies* 3.1.1. [4]Don Shackelford, "John," *New Testament Survey,* ed. Don Shackelford (Searcy, Ark.: Harding University, 1987), 151-53ರಲ್ಲಿ ಹೆಚ್ಚಾದ ವಿವರಗಳನ್ನು ಚರ್ಚಿಸಲಾಗಿದೆ. [5]ಇದು ಮತ್ತು ಇತರರ ವಿವರಗಳು ಯೋಹಾನನಲ್ಲದೆ ಇತರ ಬರಹಗಾರ ಇರುವುದೆಂಬುದನ್ನು ಬಲಪಡಿಸುವದಿಲ್ಲ. (Merrill C. Tenney, *New Testament Survey* [Grand Rapids, Mich.: Wm. B. Eerdmans Publishing Co., 1961] 187.) [6]ಸಲೋಮಿ ಹಾಗೂ ಯೇಸುವಿನ ತಾಯಿ ಸಂಬಂಧಿಕಳಿರಬಹುದು (ಮಾರ್ಕ 15:40 ಮತ್ತು ಯೋಹಾನ 19:25); ಆದ್ದರಿಂದ ಯೇಸು ತನ್ನ ತಾಯಿಯನ್ನು ಯೋಹಾನನಿಗೆ ಒಪ್ಪಿಸಿದನು. ಯೋಹಾನನು ಮತ್ತು ಯೇಸು ಸಂಬಂಧಿಕರಾಗಿರಬಹುದು. [7]ಇಂತಹ ಮುಕ್ತಾಯಕ್ಕೆ ಬರಲು ಕಾರಣವೇನೆಂದರೆ, ಆತನು ಪೇತ್ರನಿಗಿಂತ ಮುಂದಿದ್ದನು (ಯೋಹಾನ 20:4). ಮತ್ತೊಂದೆರೆ ಲಭ್ಯವಿರುವ ಒಳ್ಳೆಯ ರುಜುವಾತಿನ ಪ್ರಕಾರ ಇತರ ಶಿಷ್ಯರಿಗಿಂತ ಆತನು ಹೆಚ್ಚು ಕಾಲ ಜೀವಿಸಿದನು. ಆತನು ಯೇಸುವನ್ನು ಹಿಂಬಾಲಿಸುವಾಗ ಸರಾಸರಿ ಇಪ್ಪತ್ತೈದು ವರ್ಷವುಳ್ಳವನೆಂದು ಹಲವರು ಹೇಳಿಕೊಳ್ಳುತ್ತಾರೆ. [8]ದೈವ ಪ್ರೇರೇಪಣೆ ಇಲ್ಲದ ಬರಹಗಾರರ ಪ್ರಕಾರ ಯೋಹಾನನು ಶಿರಚ್ಛೆದನೆ ಮಾಡಲ್ಪಟ್ಟನು; ಇತ್ತಿಚಿನ ಬರಹಗಾರರು ಹೇಳುವದೇನಂದರೆ, ಆತನು ಎಫೆಸದಲ್ಲಿ ವೃದ್ಧನಾಗಿ ಸತ್ತನು. [9]Irenaeus *Against Heresies* 3.1.1. [10]ಅದು ದೇವರ ಚಿತ್ತವಾಗಿತ್ತು ಆದ್ದರಿಂದ ಯೋಹಾನನು ಈ ಸುವಾರ್ತೆಯನ್ನು ಬರೆದ ನೆಂದು ಅರ್ಥಮಾಡಿಕೊಳ್ಳಬೇಕು. ಮತ್ತು ಪರಿಶುದ್ಧಾತ್ಮನಿಂದ ಪ್ರೇರೇಪಿಸಲ್ಪಟ್ಟನು.

[11]ಯೋಹಾನನ ಸುವಾರ್ತೆ ಹಾಗೂ 1ನೇ ಯೋಹಾನ ಪತ್ರಿಕೆಗೆ ಹತ್ತಿರದ ಸಂಬಂಧವಿದೆ. ಊದಾಹರಣೆಯಾಗಿ ಆರಂಭದ ಮಾತುಗಳನ್ನು ಹೋಲಿಸಿ ನೋಡಿ (ಯೋಹಾನ 1:1, 2, 14; 1 ಯೋಹಾನ 1:1-3). [12]ಕ್ರಿಸ್ತನ ಬಗ್ಗೆ ಈ ದಿನಗಳಲ್ಲಿ ಅನೇಕ ಸುಳ್ಳು ಭಾವನೆಗಳನ್ನು ಪ್ರಕಟಿಸುತ್ತಿವೆ ಆದರಿಂದ ಯೋಹಾನನು ಒತ್ತಿ ಹೇಳುವ ವಿಷಯ ಇವತ್ತಿಗೂ ಅವಶ್ಯವಾಗಿದೆ. [13]ಯೋಹಾನನು ಯೇಸುವಿನ ಕುರಿತು ಮಾತಾಡಿದನೆಂದು ಸಂದರ್ಭವು ಸೂಚಿಸುತ್ತದೆ. [14]ತಿಳಿಯದ ಬರಹಗಾರನು 2ನೇಯ ಶತಮಾನದಲ್ಲಿ ಈ ಪುಸ್ತಕವನ್ನು ಬರೆದನೆಂದು ಹಲವರು ಹೇಳಿಕೊಳ್ಳುತ್ತಾರೆ (ಬಹುಶಃ ಯೋಹಾನನಾಗಿರಬಹುದು). ಏನಾದರು ಇತ್ತಿಚಿನ ಹೊಸ ಒಡಂಬಡಿಕೆಯ ಪ್ರತಿಯಲ್ಲಿ ಯೋಹಾನ 18:31-33, 37, 38 ವಾಕ್ಯಭಾಗಗಳಿವೆ. 2ನೇ ಶತಮಾನದ ಮೊದಲನೆಯದಲ್ಲಿ ಈ ಪ್ರತಿಯು ಐಗುಪ್ತನಲ್ಲಿ ಹಂಚಲಾಗಿದೆ. ಇದು ಕ್ರಿ.ಶ. 125 ಎಂದು ಹೇಳಲಾಗಿದೆ ಆದರಿಂದ ಈ ಬರಹಗಳು ಒಂದನೇ ಶತಮಾನದ್ದಾಗಿದೆ ಎಂದು ಹೇಳಲಾಗಿದೆ. [15]ಬರಹಗಾರ ಯಾರೆಂಬುದು ಗೊತ್ತಿಲ್ಲ. Quoted in Eric W. Hayden, *Preaching Through the Bible* (Grand Rapids, Mich.: Zondervan Publishing House, 1964), 193. [16]"ಅದ್ಭುತಗಳನ್ನು," "ಮಹತ್ಕಾರ್ಯ," ಹಾಗೂ "ಸೂಚಕಕಾರ್ಯ" ಎಂದು ಬೈಬಲಿನಲ್ಲಿ ಅದ್ಭುತಗಳನ್ನು ಕರೆಯಲಾಗಿದೆ (ಮತ್ತಾಯ 11:20; ಮಾರ್ಕ 16:20; ಯೋಹಾನ 4:48). "ಅದ್ಭುತವೆಂಬುದು" ಸಂಭವಿಸಿದ್ದು ಪ್ರಕೃತಿಗೆ ಭಿನ್ನವಾದದ್ದು; "ಮಹತ್ಕಾರ್ಯ" ಎಂಬುದು ಅದ್ಭುತವನ್ನು ನೋಡಿದವರಲ್ಲಿ ಉಂಟಾದ ಪ್ರಭಾವವನ್ನು ಒತ್ತಿ ಹೇಳುತ್ತದೆ; "ಸೂಚಕಕಾರ್ಯ" ಎಂಬುದು ಅದ್ಭುತದ ಉದ್ದೇಶವನ್ನು ತಿಳಿಸುತ್ತದೆ. ಯೆಹೂದ್ಯರು "ಸೂಚಕಕಾರ್ಯ"ವನ್ನು ಕೇಳುತ್ತಾರೆ ಎಂಬುದನ್ನು ಗಮನಿಸಿ (ನೋಡಿ ಮತ್ತಾಯ 12:38; 16:1; 1 ಕೊರಿಂಥ 1:22ನ್ನು ನೋಡಿ). [17]Tenney, 190. [18]The NASB and the NIV ರಲ್ಲಿ "ಭರವಸೆ" ಎಂದಿದೆ. The Amplified Bible has "ಅವರಿಗಾಗಿ ಆತನಲ್ಲಿ ಭರವಸೆ ಇಲ್ಲ." [19]Tenney, 190-91. [20]"ನಾನು" ಎಂಬುದನ್ನು ನಂತರ ಚರ್ಚಿಸೋಣ.

[21]ಈ ನಾಲ್ಕು ವಾಕ್ಯಗಳ ಆಧಾರದ ಮೇಲೆ ಯೇಸುವಿನ ಸೇವೆಯ ಕಾಲದ ಬಗ್ಗೆ ಅನೇಕ ವಿದ್ಯಾವಂತರು ಯೋಚಿಸುತ್ತಾರೆ. ("ವೈಯಕ್ತಿಕ ಕೆಲಸಗಳನ್ನು ಕ್ರಿಸ್ತನು ಎಷ್ಟು ಕಾಲ ಮಾಡಿದನು" ಎಂಬ ಪಾಠವನ್ನು ನೋಡಿ. ಈ ವಾಕ್ಯಭಾಗಗಳ ಪ್ರಾಮುಖ್ಯತೆಯಿಂದ ಅವುಗಳನ್ನು ಇಟಾಲಿಕ್ಸ್‌ನಲ್ಲಿ ತೋರಿಸಲಾಗಿದೆ. [22]Tenney, 192. [23]Shackelford, 153-55.